# 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| **ಎಸ್ ಸಿ :** | 167/2021 |

| | | |
|---|---|---|
| ಸಾಕ್ಷಿದಾರರ ಹೆಸರು | ನಿಂಗೇಗೌಡ | |
| ತಂದೆಯ ಹೆಸರು | ಮಂಚೇಗೌಡ | ಸಾಕ್ಷಿಗೆ **ದಿ:17.04.2023** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | 65 ವರ್ಷ | |
| ಉದ್ಯೋಗ | ವ್ಯವಸಾಯ | ಪಿ.ಡಬ್ಲ್ಯೂ-03 |
| ವಾಸ ಸ್ಥಳ | ನುಗ್ಗೆಹಳ್ಳಿ, ಕೊಪ್ಪಲು ಗ್ರಾಮ, ಟಿ.ನರಸೀಪುರ ತಾಲ್ಲೂಕು. | ಸಿ.ಡಬ್ಲ್ಯೂ-03 |

## ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ಆರೋಪಿ ನನಗೆ ಪ್ರಾಸಾ-2, ಚಾಸಾ-2 ಮತ್ತು ಚಾಸಾ-4 ಹಾಗೂ ಮೃತ ಮಹದೇವಮ್ಮ ಇವರ ಪರಿಚಯ ಇರುತ್ತದೆ. ಮಹದೇವಮ್ಮ ಇವರು ಚಾಸಾ-4 ರವರ ಹೆಂಡತಿ ಇರುತ್ತಾರೆ. ನಾನು ಮೇಲೆ ಹೇಳಿದ ಸಾಕ್ಷಿದಾರರು ಒಂದೇ ಊರಿನವರು ಇರುತ್ತೇವೆ. ಆರೋಪಿತರು ನುಗ್ಗೆಹಳ್ಳಿ, ಕೊಪ್ಪಲು ಗ್ರಾಮದವರು ಇರುತ್ತಾರೆ. ಸುಮಾರು 2 ವರ್ಷದ ಹಿಂದೆ ಮಹದೇವಮ್ಮ ಮೃತಪಟ್ಟಿರುತ್ತಾರೆ. ಮೃತ ಮಹದೇವಮ್ಮ ಇವಳಿಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ, ಅದರಲ್ಲಿ ಮೊದಲನೇಯವರು ಶಿವಕುಮಾರ್, ಎರಡನೇಯವರು ಮಂಜು ಎಂದು ಹೆಸರು ಇರುತ್ತದೆ. ಅವರಿಬ್ಬರಿಗೂ ಮದುವೆ ಆಗಿರುತ್ತದೆ. ಮಹದೇವಮ್ಮ ಜೀವಂತ ಇದ್ದಾಗ ಒಟ್ಟು ಕುಟುಂಬದಲ್ಲಿ ಇದ್ದರು. ಮೃತಳ ಗಂಡ ವ್ಯವಸಾಯ ಮಾಡುತ್ತಾನೆ, ಮೃತಳು ಗೃಹಿಣಿ ಆಗಿದ್ದು ಮನೆ ಕೆಲಸ ಮಾಡಿಕೊಂಡು, ಅವರು ಎಮ್ಮೆ ಮೇಯಿಸುವ ಕೆಲಸ ಮಾಡುತ್ತಿದ್ದರು. ಮಹದೇವಮ್ಮ ಇವರು ಎಮ್ಮೆಗಳನ್ನು ಮೇಯಿಸಲು ಕರಿಕಲ್ಲು ಬೋರೆ ಕಡೆಗೆ ಹೋಗುತ್ತಿದ್ದರು. ನುಗ್ಗೆಹಳ್ಳಿ, ಕೊಪ್ಪಲು

ಗ್ರಾಮದಿಂದ ಕರಿಕಲ್ಲು ಬೋರೆ ಎಮ್ಮೆ ಮೇಯಿಸುವ ಜಾಗೆ 1 ½ ಕೀಲೋ ಮೀಟರ್ ದೂರ ಇರುತ್ತದೆ.

ನಾನು 2 ½ ವರ್ಷದ ಹಿಂದೆ ದೇವರ ಗುಡ್ಡದ, ನಿಂಗೇಗೌಡನ ಮನೆಯ ಬಳಿ ಮಧ್ಯಾಹ್ನ 2.30 ಸುಮಾರಿಗೆ ಅವರ ಮನೆಯ ಮುಂಭಾಗ ಕಟ್ಟೆಯ ಮೇಲೆ ಕುಳಿತಾಗ ಕೇಸರು ಗದ್ದೆ ವಿಷಯದ ಬಗ್ಗೆ ಮಾತನಾಡಲು ಹೋಗಿದ್ದೆನು, ಅವರು ಮನೆಯಲ್ಲಿ ಇರಲಿಲ್ಲ. ಆ ಸಮಯದಲ್ಲಿ ಚಾಸಾ-2 ರವರು ಜಮೀನು ಉಳುಮೆ ಮಾಡುವ ಅಲುಬೆ ತೆಗೆದುಕೊಂಡು, ನಾಗೇಂದ್ರ ಇವರ ಮನೆಗೆ ಇಡಲು ಬಂದರು. ನಾಗೇಂದ್ರ ಇವರ ಮನೆಯು, ನಾನು ಕುಳಿತುಕೊಂಡ ಮನೆಯ ಪಕ್ಕದಲ್ಲೇ ಇರುತ್ತದೆ. ಅವರು ನನಗೆ ಮಾತನಾಡಿಸಿದರು. ಆ ಸಮಯಕ್ಕೆ ಆರೋಪಿ -1 ಮತ್ತು 2 ಕರಿಕಲ್ಲು ಬೋರೆ ಕಡೆಯಿಂದ ಬಂದು, ನಮ್ಮ ಮುಂದೆ ವೇಗವಾಗಿ ಹೊರಟು ಹೋದರು. ಆಗ ನಾನು ಮತ್ತು ರಾಮು ಹುಡುಗರು ಹೀಗೆ ಏಕೆ ಓಡುತ್ತಿದ್ದಾರೆ ಎಂದು ಮಾತನಾಡಿಕೊಳ್ಳುತ್ತಿದ್ದೆವು. ಆಗ ನಾನು ಹುಡುಗರು ಆಡುವ ವಯಸ್ಸು ಹೋಗುತ್ತಾರೆ ಎಂದು ಹೇಳಿದೆನು. ನಾನು ಮನೆಯ ಕಡೆಗೆ ಹೋದೆನು, ರಾಮು ಕೂಡಾ ಮನೆಯ ಕಡೆಗೆ ಹೋದನು. ನಾನು ಮನೆಯ ಕಡೆಗೆ ಹೋಗಿ ಅರ್ಧ ಅಥವಾ ಒಂದು ಗಂಟೆಯ ನಂತರ ಜನರು ಮಹದೇವಮ್ಮ ಕರಿಕಲ್ಲು ಬೋರೆಯ ಹತ್ತಿರ ಮೃತಪಟ್ಟಿದ್ದಾಳೆ ಎಂದು ಮಾತನಾಡಿಕೊಳ್ಳುತ್ತಿದ್ದರು. ನಾನು ಕೂಡಾ ಕರಿಕಲ್ಲು ಬೋರೆಯ ಹತ್ತಿರ ಹೋದೆನು.

ನ್ಯಾಯಾಲಯದ ಸಮಯ ಮುಗಿದರಿಂದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು